


ಬಳಸಿದ ಪದಾರ್ಥಗಳು ಹಿತ ನೀಡಬೇಕು

- ಕೆನ್ನೆ ಭಾಗಕ್ಕೆ ನೀಡುವ ಪ್ಯಾಡಿಂಗ್ ಹಿತ ನೀಡುವಂತಿರಬೇಕು.
- ಗಲ್ಲದ ಭಾಗಕ್ಕೆ ನೀಡುವ ಸ್ಟ್ರಾಪ್ ಕುತ್ತಿಗೆ ಭಾಗಕ್ಕೆ ಚುಚ್ಚುವಂತಿರಬಾರದು.
- ಹುಬ್ಬಿನ ಮೇಲ್ಭಾಗದಲ್ಲಿ ನೀಡುವ ಪ್ಯಾಡಿಂಗ್ ತಲೆಯ ಅಕ್ಕಪಕ್ಕ ಒತ್ತದಂತಿರಬೇಕು.
- ಹೆಲ್ಮೆಟ್ ಒಳಗೆ ಎಲ್ಲಿಯೂ ಅನಗತ್ಯವಾಗಿ ಒತ್ತುವಂತಹ ಯಾವುದೇ ಭಾಗ ಇರಬಾರದು.
- ಬಾಯಿಯನ್ನು ಸುಲಭವಾಗಿ ಅಲುಗಾಡಿಸುವಂತಿರಬೇಕು.
- ಹೊರಗಿನ ಅನಗತ್ಯ ಶಬ್ದಗಳನ್ನು ಹೆಲ್ಮೆಟ್ ನಿಯಂತ್ರಿಸುವಂತೆ ವಿನ್ಯಾಸಗೊಳಿಸಿರಬೇಕು.
- ತುಂಬಾ ಬಿಗಿಯಾದ ಹೆಲ್ಮೆಟ್ ಧರಿಸಿದರೆ ತೆಗೆಯುವಾಗ ಅದು ಕೆನ್ನೆಗೆ ಉಜ್ಜುತ್ತದೆ.

ತಲೆ ಹಾಗೂ ಮುಖದ ಭಾಗವನ್ನು ರಕ್ಷಿಸುವ ಸಂಪೂರ್ಣ ಹೆಲ್ಮೆಟ್‌ಗೆ ಫೇಸ್‌ಶೀಲ್ಡ್ ಅಥವಾ ವೈಸರ್ ಅಳವಡಿಸಿರುತ್ತಾರೆ. ಭಾರತದಲ್ಲಿ ಬಹುತೇಕರು ಇದನ್ನು ತೆಗೆದಿರುವುದು ಸಾಮಾನ್ಯ. ಇದಕ್ಕೆ ಮುಖ್ಯ ಕಾರಣ ಅಸ್ಪಷ್ಟವಾಗಿ ಕಾಣಿಸುವ ಸಮಸ್ಯೆ. ಹೀಗಾಗಿ ಗೀರು ನಿರೋಧಕ ಹಾಗೂ ಮಂಜು ಕವಿಯದಂತಹ ವೈಸರ್ ಅಭಿವೃದ್ಧಿಯಾಗಬೇಕಿದೆ. ಇವು ದುಬಾರಿ ಹೆಲ್ಮೆಟ್‌ಗಳಲ್ಲಿ ಇವೆ. ಆದರೆ ಬಹುತೇಕ ಜನರ ಕೈಗೆಟಕುವ ದರಕ್ಕೆ ಸಿಗುವ ಹೆಲ್ಮೆಟ್‌ಗಳಲ್ಲೂ ಇಂಥ ವೈಸರ್‌ಗಳನ್ನು ಅಳವಡಿಸುವ ಕುರಿತು ಬೇಡಿಕೆಗಳಿವೆ.

## ಸುರಕ್ಷತೆಯ ಮಾನದಂಡ

ಬೆಂಗಳೂರಿನ ಚಿಕ್ಕಪೇಟೆಯಾಗಲೀ ಅಥವಾ ಇನ್ಯಾವುದೇ ನಗರದ ಮಾರುಕಟ್ಟೆ ಪ್ರದೇಶದಲ್ಲಿ ಸಣ್ಣದಾದ ಹೆಲ್ಮೆಟ್ ಹಾಕಿರುವುದನ್ನು ಗಮನಿಸಿರಬಹುದು. ಹಾಕಲು ಹಾಗೂ ತೆಗೆಯಲು ಯಾವುದೇ ಗೋಜು ಇಲ್ಲದ ಈ ಹೆಲ್ಮೆಟ್‌ಗೆ ಯಾವುದೇ ಸುರಕ್ಷತಾ ಮಾನದಂಡಗಳಿಲ್ಲ. ಜತೆಗೆ ಇವುಗಳು ದ್ವಿಚಕ್ರ ವಾಹನ ಸವಾರಿಗೆ ಬಳಸಬಾರದ ಹೆಲ್ಮೆಟ್‌ಗಳು. ಆದರೂ ಇವುಗಳು ಅವ್ಯಾಹತವಾಗಿ ಮಾರಾಟವಾಗುತ್ತಿವೆ.

ಇತರ ಉತ್ಪನ್ನಗಳಂತೆ ಹೆಲ್ಮೆಟ್‌ಗಳಲ್ಲೂ 'ಐಎಸ್‌ಐ' ಮುದ್ರೆಯ ಗುಣಮಟ್ಟದ ಉತ್ಪನ್ನಗಳು ಲಭ್ಯ. ಈ ಮಾನ್ಯತೆ ಪಡೆದ ಹೆಲ್ಮೆಟ್‌ಗಳನ್ನೇ ಬಳಸಬೇಕು ಎಂಬ ನಿಯಮವೂ ಜಾರಿಯಲ್ಲಿದೆ. ಭಾರತದಲ್ಲಿ ಲಭ್ಯವಿರುವ ಬಹಳಷ್ಟು ಕಂಪನಿಗಳ ಹೆಲ್ಮೆಟ್‌ಗಳು ಈ ಮಾನ್ಯತೆಯನ್ನು ಪಡೆದಿವೆ.

ಇದರೊಂದಿಗೆ 'ಇಸಿಇ 22.05' ಎಂಬ ಮಾನ್ಯತೆಯನ್ನು ಐರೋಪ್ಯ ರಾಷ್ಟ್ರಗಳು ಹೊಂದಿವೆ. 'ಡಿಒಟಿ' ಎಂಬ ಮಾನ್ಯತೆ ಅಮೆರಿಕದಲ್ಲಿದೆ. ಇವುಗಳು ಕ್ರಾಷ್ ಪರೀಕ್ಷೆಯಲ್ಲಿ ಪಾಸಾಗಿರುವ ಹೆಲ್ಮೆಟ್‌ಗಳು. ಡಿಒಟಿ ಮಾನ್ಯತೆ ಪಡೆಯಲು ಹೆಲ್ಮೆಟ್ ಅನ್ನು ಅತಿ ಎತ್ತರದಿಂದ ನೆಲಕ್ಕೆ ಎಸೆಯಲಾಗುತ್ತದೆ. ಇಸಿಇ 22.05 ಪರೀಕ್ಷೆಯಲ್ಲೂ ಹೆಲ್ಮೆಟ್‌ನ ಬಹಳಷ್ಟು ಭಾಗಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ.

ಭಾರತದಲ್ಲಿ ಸರ್ಕಾರ ಜಾರಿಗೆ ತಂದಿರುವ ಹೊಸ ಕಾನೂನು ಅನ್ವಯ ಹೆಲ್ಮೆಟ್‌ಗಳು 1200 ಗ್ರಾಂ ಅಥವಾ ಅದಕ್ಕಿಂತ ಕಡಿಮೆ ತೂಕ ಇರಬೇಕು. ಜತೆಗೆ 'ಐಎಸ್‌ಐ' ಮಾರ್ಕ್ ಇರುವ ಹೆಲ್ಮೆಟ್‌ಗಳನ್ನೇ ಬಳಸಬೇಕು ಎಂಬ ನಿಯಮವೂ ಇದೆ.

## ಭಾರತದಲ್ಲಿ ಲಭ್ಯವಿರುವ ಬ್ರಾಂಡ್‌ಗಳು

ಮೋಟಾರು ವಾಹನ ಕಾಯ್ದೆ 1988ರ ಅನ್ವಯ ಮುಖ ಹಾಗೂ ತಲೆಯನ್ನು ಸುತ್ತುವರಿದ ಹೆಲ್ಮೆಟ್ ಧರಿಸಬೇಕು. ಈ ಗುಣಮಟ್ಟವನ್ನು ಕಾಯ್ದು ಹೆಲ್ಮೆಟ್ ಸಿದ್ಧಪಡಿಸುವ ಕೆಲವೊಂದು ಬ್ರಾಂಡ್‌ಗಳು ಜನಪ್ರಿಯತೆ ಪಡೆದಿವೆ.

ಸ್ಟೀಲ್‌ಬರ್ಡ್: ಸ್ಟೀಲ್ಬರ್ಡ್ ಬ್ರಾಂಡ್ ಹೆಸರಿನ ಅಡಿಯಲ್ಲಿ ಹೆಲ್ಮೆಟ್‌ಗಳನ್ನು ಮಾರಾಟ ಮಾಡುತ್ತಿರುವ ಕಂಪನಿಯು, 'ಸ್ಟೀಲ್‌ಬರ್ಡ್ ಏರಿಸ್', 'ಸ್ಟೀಲ್‌ಬರ್ಡ್ ಏರ್', 'ಸ್ಟೀಲ್‌ಬರ್ಡ್ ಇಗ್ನೈಟ್' ಎಂಬ ವಿಭಿನ್ನ ಮಾದರಿಯ ಹೆಲ್ಮೆಟ್‌ಗಳನ್ನು ಹೊಂದಿದೆ. ಗಾಲ್ಫ್‌ಬಾಲ್ ಆಕಾರದ 'ಬೀಫೆ' ಹೆಲ್ಮೆಟ್‌ಗೆ ಹೆಸರುವಾಸಿ.

ರಾಯಲ್ ಎನ್‌ಫೀಲ್ಡ್: ಮೋಟಾರುಸೈಕಲ್‌ಗೆ ಹೆಸರುವಾಸಿಯಾದ 'ರಾಯಲ್ ಎನ್‌ಫೀಲ್ಡ್' ಕಂಪನಿ, ಹೆಲ್ಮೆಟ್ ಸೇರಿದಂತೆ ಬಿಡಿಭಾಗಗಳ ತಯಾರಿಕೆಯಲ್ಲೂ ಜನಪ್ರಿಯತೆ ಪಡೆದಿದೆ.